ಆರ್.ಡಬ್ಲೂಃ 1

<u>ದಿನಾಂಕಃ **15.12.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು:- ಅರ್ಜಿದಾರರ ಪರವಾಗಿ **Sri. SCN,** ವಕೀಲರಿಂದ</u>

1. ನಾನು ಐ.ಟಿ.ಐ. ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ತಾಯಿ ಜೀವಂತ ಇರುತ್ತಾರೆ. ನನಗೆ ಒಬ್ಬಳು ಸಹೋದರಿ ಮತ್ತು ಸಹೋದರ ಇರುತ್ತಾರೆ. ನನ್ನ ಮತ್ತು ಅರ್ಜಿದಾರಳ ವಿವಾಹವು ಹಿರಿಯರ ಸಮಕ್ಷಮ ವರೋಪಚಾರ ಮಾತುಕತೆ ಮಾಡಿ ನಡೆದಿರುತ್ತದೆ ಎಂದರೆ ಸರಿ. ನನ್ನ ಮದುವೆ ಕಾಲಕ್ಕೆ ವರೋಪಚಾರ ಎಂದು 1 ತೊಲೆ ಬಂಗಾರ, 10 ಸಾವಿರ ಹಣ ಮತ್ತು ಬಾಂಡೆ ಸಾಮಾನು ನೀಡಿರುತ್ತಾರೆ. ಅರ್ಜಿದಾರಳು ಮದುವೆಯ ಕಾಲಕ್ಕೆ 2 ತೊಲೆ ಬಂಗಾರ, 50 ಸಾವಿರ ನಗದು ಹಣ ಹಾಗು 1 ಲಕ್ಷ ಮೌಲ್ಯದ ಬಾಂಡೆ ಸಮಾನು ನೀಡಿರುತ್ತಾರೆ ಎಂದರೆ ಸರಿಯಲ್ಲ.

2. ಅರ್ಜಿದಾರಳು ಮದುವೆಯಾದ 1 ತಿಂಗಳ ನಂತರ ನನ್ನ ಮನೆಗೆ ಬಾಳ್ವೆ ಮಾಡಲು ಬಂದಿರುತ್ತಾರೆ. ಅರ್ಜಿದಾರಳು ಮದುವೆಯಾದ ನಂತರ ಮೊದಲು 3 ದಿನ ನಂತರ 5 ದಿನ ಮಾತ್ರ ನನ್ನ ಮನೆಯಲ್ಲಿ ಇದ್ದಳು. ಅರ್ಜಿದಾರಳು ಸೋಮೆಶ್ವರ ಜಾತ್ರೆಗೆ ಎಂದು ಬಂದಿದ್ದು ಪುನಃ ನನ್ನ ಮನೆಗೆ ವಾಪಸ್ಸು ಬಂದಿರುವುದಿಲ್ಲ. ಅರ್ಜಿದಾರಳನ್ನು ಪುನಃ ಕರೆಯುವ ಸಲುವಾಗಿ ಪೋನ ಮುಖಾಂತರ ಮಾತನಾಡಿದ್ದು, ಹಿರಿಯರ ಸಮಕ್ಷಮ ಮಾತನಾಡಿರುತ್ತೇನೆ. ಅರ್ಜಿದಾರಳನ್ನು ಪುನಃ ಕಳುಹಿಸಿಕೊಡುವಂತೆ ಹಿರಿಯರಾದ ಮಗಾವಿ ಶೆಟ್ಟರ, ವಿನಾಯಕ, ಲಕ್ಷ್ಮೀ ಮತ್ತು ಅವರ ತಂದೆ

ತಾಯಿಯ ಜೊತೆ ಮಾತನಾಡಿರುತ್ತೇವೆ. ಅರ್ಜಿದಾರಳೆ ಪುನಃ ನನ್ನ ಮನೆಗೆ ವಾಪಸ್ಸು ಬಂದಿದ್ದು, ನಾನು ಹಿರಿಯರೊಂದಿಗೆ ಮಾತನಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ನನ್ನ ಜೊತೆ ಮನೆಗೆ ಬಂದಿದ್ದಾಗ ನನ್ನ ತಾಯಿ ವರದಕ್ಷಿಣೆ ವಿಚಾರವಾಗಿ ಬೈದಾಡಿದ್ದು, ಅರ್ಜಿದಾರಳು ಅವರ ಸಹೋದರನಿಗೆ ವಿಚಾರವನ್ನು ಫೋನ ಮೂಲಕ ತಿಳಿಸಿದಾಗ ಅವರನ್ನು ನಾನೇ ಮನೆಯಿಂದ ಹೊರ ಹಾಕಿರುತ್ತೇನೆ ಎಂದರೆ ಸರಿಯಲ್ಲ.

3. ದಿಃ 25.04.2023 ರಂದು ಅರ್ಜಿದಾರಳಿಗೆ ಅವಾಚ್ಯವಾಗಿ ಬೈದು ನಿಂದಿಸಿದ ಕಾರಣ ಅರ್ಜಿದಾರಳು ಅವರ ಸಹೋದರರನ್ನು ಕರೆಸಿ ತವರು ಮನೆಗೆ ಹೋಗಿದ್ದು, ಅಲ್ಲಿಂದ ನಾನು ಪುನಃ ಅವರನ್ನು ಮರಳಿ ಬರುವಂತೆ ಕರೆದಿರುವುದಿಲ್ಲ ಎಂದರೆ ಸರಿಯಲ್ಲ. ಸೋಮೆಶ್ವರ ಜಾತ್ರೆ ಮುಗಿದ ನಂತರ ಅರ್ಜಿದಾರಳು, ಅವರ ಸಹೋದರ ಹಾಗು ಊರಿನ ಹಿರಿಯರು ಅರ್ಜಿದಾರಳನ್ನು ನನ್ನ ಮನೆಗೆ ಬಿಡಲು ಬಂದಾಗ ಅವರಿಗು ಬೈದು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂಡೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.